ತಾರೀಖು 29ನೆ ಏಪ್ರೆಲ್ 1907.

ನಂ. ರೆ. 9596—ಲ್ಯಾ. ರೆ. 524-06-3, ಸನ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜೇಷ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ:—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ ಮೈಸೂರ ಮುನಿಸಿಪಾಲ್ಟಿಯವರಿಕ್ಕಾಗಿ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಹುಣಸೂರು ಗುಂಪಿನ ತಾಲ್ಲೂಕುಗಳ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರೀ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ತಿಸ್ಪ್ರತ್ತು	ತಾಲ್ಲೂಕು.	ಹೋಬಳಿ.	ಗ್ರಾಮದ.	ಖಾತೇದಾರನ ಹೆಸರು.	ಸರ್ವೆ ನಂಬರು.	ಒಟ್ಟು ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಗಡಿ.			
									ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
						ಎ. ಗು.	ರೂ. ಆ.	ಎ. ಗು.				
ಮೈಸೂರು	ಹೆಗ್ಗಡದೇವನಕೋಟೆ	ಸರಗೂರು	ಸರಗೂರು ದಾಖಲೆ ಹೊಸಅಗ್ರಹಾರಹುಂಡಿ	ಶ್ರೀಗಿರಿ ಕೆಟ್ಟ ...	179	9 37	7 7	9 37	ಹುಣಸೂರು-ಬೆಗ್ಗೂರು ರಸ್ತೆ	ಖಾಲಿ	ಕರಿಯಪ್ಪಣಿ ಕೆಟ್ಟಿನ ಹೊಲ	ಹಳೇ ಗ್ರಾಮದ ನಿವೇಶನ

ತಾರೀಖು 6ನೆ ಮೇ 1907.

ನಂ. ರೆ. 9762—ಫಾ. 69-05—9, 1900ನೆ ಇಸವಿಯ 11ನೆ ನಂಬರು ಮೈಸೂರು ಫಾರೆಸ್ಟ್ ರೆಗ್ಯುಲೇಷನಿನ 17ನೆ ಪ್ರಕರಣದ ನಿಯಮಗಳನ್ನನುಸರಿಸಿ, ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು ಈ ಇಸ್ತಿಹಾರ್‌ನಾಮಗೆ ಲಗತ್ತಿರುವ ಷೆಡ್ಯೂಲ್ ಪಟ್ಟಿಯಲ್ಲಿ ಕಂಡ ಚತುರ್ಗಡಿಗಳುಳ್ಳ ವಿಸ್ತೀರ್ಣವನ್ನು ಸದರಿ ಇಸ್ತಿಹಾರ್‌ನಾಮೆಯ ಕೆಳಗೆ ವಿವರಿಸಿರುವ ಅಧಿಕಾರಗಳ ಚಲಾವಣೆಗೆ ಒಳಪಟ್ಟು 1907ನೆ ಇಸವಿಯ ಜುಲೈ 1ನೆ ತಾರೀಖಿನಿಂದ ಸ್ವೇಟು ಫಾರೆಸ್ಟ್ಸ್ ಯಾ ಸಂಸ್ಥಾನ ಜಂಗಲಿಯೆಂದು ಭಾವಿಸತಕ್ಕದ್ದೆಂದು ಹುಕುಂ ದಯಪಾಲಿಸಿರುತ್ತಾರೆ:—

ಷೆಡ್ಯೂಲ್

ತಿಸ್ಪ್ರತ್ತು.	ತಾಲ್ಲೂಕು ಹೋಬಳಿ ಗ್ರಾಮ.	ಸುಮಾರು ವಿಸ್ತೀರ್ಣ.	ತಾತ್ಕಾಲಿಕ ಹೆಸರು.	ಚತುರ್ಗಡಿಗಳು.
ಹಾನಗಲ್	ಅರಸೀಕೆರೆ ತಾಲ್ಲೂಕು.	5.77 ಚದರ ಮೈಲಿಗಳು.	ಚಾಕಾನಕಟ್ಟೆ	ಉತ್ತರಕ್ಕೆ.—ಶಂಕರನಹಳ್ಳಿ ಗ್ರಾಮದ ಸರ್ವೆ 7ನೆ ನಂಬರಿನ ಆಗ್ನೇಯ ಮೂಲೆ (ವೈರಾಪುರ, ಶಂಕರನಹಳ್ಳಿ ಮತ್ತು ಹಳ್ಳಿತಿಮ್ಮನಹಳ್ಳಿ ಗ್ರಾಮಗಳ ಮುಕ್ತಪ್ಪೆ) ಯಿಂದ ಹೊರಟು ವೀರಯ್ಯ ರೇಬೆಯ ಆಗ್ನೇಯಕ್ಕೆ ಹಳ್ಳಿ ತಿಮ್ಮನಹಳ್ಳಿ ಗ್ರಾಮದ ಸರ್ವೆ 12ನೆ ನಂಬರಿನಲ್ಲಿಯೂ ಆಗ್ನೇಯಕ್ಕೂ ಪೂರ್ವಕ್ಕೂ ಕಲ್ಲುಗುಂಡಿ ಗ್ರಾಮದ ಸರ್ವೆ 62ನೆ ನಂಬರಿನಲ್ಲಿಯೂ ಸುಮಾರು 139 ಸರಪಣಿಗಳ ದೂರ ಹೋಗುತ್ತದೆ. ಪೂರ್ವಕ್ಕೆ.—ಅಲ್ಲಿಂದ ದಕ್ಷಿಣಕ್ಕೆ ಕಲ್ಲುಗುಂಡಿ ಗ್ರಾಮದ ಸರ್ವೆ 62ನೆ ನಂಬರಿನಲ್ಲಿ ಸುಮಾರು 21 ಸರಪಣಿಗಳ ದೂರ ಗೊಲ್ಲರಹಳ್ಳಿ ಗ್ರಾಮದ ಸರ್ವೆ 45ನೆ ನಂಬರಿನ ಅತ್ಯಂತ ಪಶ್ಚಿಮ ಮೂಲೆಗೆ ಹೋಗುತ್ತದೆ; ಅಲ್ಲಿಂದ ಕಲ್ಲುಗುಂಡಿ ಮತ್ತು ಗೊಲ್ಲರಹಳ್ಳಿ ಗ್ರಾಮಗಳ ಎಲ್ಲೆಯಲ್ಲಿ ಕಲ್ಲುಗುಂಡಿ, ಗೊಲ್ಲರಹಳ್ಳಿ ಮತ್ತು ನರಸೀಪುರ ಗ್ರಾಮಗಳ ಮುಕ್ಕುಪ್ಪೆಗೆ ಹೋಗುತ್ತದೆ; ಅಲ್ಲಿಂದ ಪೂರ್ವಕ್ಕೆ ನರಸೀಪುರ ಗ್ರಾಮದ ಸರ್ವೆ 62ನೆ ನಂಬರಿನಲ್ಲಿ ಸುಮಾರು 79 ಸರಪಣಿಗಳ ದೂರ ಸರ್ವೆ 58ನೆ ನಂಬರಿನ ನೈರುತ್ಯ ಮೂಲೆಗೆ ಹೋಗಿ, ಅಲ್ಲಿಂದ ದಕ್ಷಿಣಕ್ಕೆ ನರಸೀಪುರ ಮತ್ತು ಜನ್ನಾವರ ಗ್ರಾಮಗಳ ಮಧ್ಯೆ ಎಲ್ಲೆಯಲ್ಲಿ ಮುಂಜೆ ಹೇಳಿದ ಗ್ರಾಮಗಳ ಮತ್ತು ಹಿರಿಕಲ್ಲುಗುಡ್ಡ ಸ್ವೇಟ್ ಫಾರೆಸ್ಟಿನ ಮುಕ್ಕುಪ್ಪೆಗೆ ಹೋಗುತ್ತದೆ; ಅಲ್ಲಿಂದ ಪಶ್ಚಿಮಕ್ಕೆ ನರಸೀಪುರ ಮತ್ತು ಹಿರಿಕಲ್ಲುಗುಡ್ಡ ಸ್ವೇಟ್ ಫಾರೆಸ್ಟಿನ ಎಲ್ಲೆಯಲ್ಲಿ ನರಸೀಪುರ, ಹಿರಿಕಲ್ಲುಗುಡ್ಡ ಸ್ವೇಟ್ ಫಾರೆಸ್ಟ್ ಮತ್ತು ಮರಟಗೆರೆ ಗ್ರಾಮಗಳ ಮುಕ್ಕುಪ್ಪೆಗೆ ಹೋಗುತ್ತದೆ; ಅಲ್ಲಿಂದ ದಕ್ಷಿ

ಣಕ್ಕೆ ಮರಟಗೆರೆ, ಹಿರಿಕಲ್ಲುಗುಡ್ಡ ಸ್ಟೇಟ್ ಫಾರೆಸ್ಟ್, ಚಿಕ್ಕಮ್ಮನಹಳ್ಳಿ ಮತ್ತು ಹಿರಿಕಲ್ಲುಗುಡ್ಡ ಸ್ಟೇಟ್ ಫಾರೆಸ್ಟ್‌ಗಳ ಎಲ್ಲೆಯಲ್ಲಿ ಚಿಕ್ಕಮ್ಮನಹಳ್ಳಿ, ಹಿರಿಕಲ್ಲುಗುಡ್ಡ ಸ್ಟೇಟ್ ಫಾರೆಸ್ಟ್ ಮತ್ತು ಮುರುಳಸಿದ್ದನಹಳ್ಳಿ ಗ್ರಾಮಗಳ ಮುಕ್ತಾಪ್ಪೆಗೆ ಹೋಗಿ, ಅಲ್ಲಿಂದ ಆ ಸ್ಟೇಯಕ್ಕೆ ಮುರುಳಸಿದ್ದನಹಳ್ಳಿ ಮತ್ತು ಹಿರಿಕಲ್ಲುಗಡ್ಡ ಸ್ಟೇಟ್ ಫಾರೆಸ್ಟ್‌ಗಳ ಎಲ್ಲೆಯಲ್ಲಿ ಮುರುಳಸಿದ್ದನಹಳ್ಳಿ, ಹಿರಿಕಲ್ಲುಗುಡ್ಡ ಸ್ಟೇಟ್ ಫಾರೆಸ್ಟ್, ಮತ್ತು ಮೈಲನಹಳ್ಳಿ ಗ್ರಾಮಗಳ ಮುಕ್ತಾಪ್ಪೆಗೆ ಹೋಗುತ್ತದೆ.

ದಕ್ಷಿಣಕ್ಕೆ.—ಅಲ್ಲಿಂದ ಪಶ್ಚಿಮಕ್ಕೆ ಮೈಲನಹಳ್ಳಿ ಗ್ರಾಮದ ಉತ್ತರಮೇರೆಯಲ್ಲಿ ಮುರುಳಸಿದ್ದನಹಳ್ಳಿ ಗ್ರಾಮದ ಸರ್ವೆ 4ನೆ ನಂಬರಿನ ಆಗ್ನೇಯ ಮೂಲೆಯಿಂದ ಪೂರ್ವಕ್ಕೆ ಸುಮಾರು 21 ಸರಪಣಿಗಳ ದೂರದಲ್ಲಿ ಬಂದು ಸ್ಥಳಕ್ಕೆ ಹೋಗುತ್ತದೆ.

ಪಶ್ಚಿಮಕ್ಕೆ.—ಅಲ್ಲಿಂದ ಉತ್ತರಕ್ಕೆ ಮುರುಳಸಿದ್ದನಹಳ್ಳಿ ಗ್ರಾಮದ ಸರ್ವೆ 2ನೆ ನಂಬರಿನಲ್ಲಿ ಚಿಕ್ಕಮ್ಮನಹಳ್ಳಿ ಗ್ರಾಮದ ಸರ್ವೆ 50ನೆ ನಂಬರಿನ ದಕ್ಷಿಣ ಮೇರೆಯಲ್ಲಿ ಅದರ ಆಗ್ನೇಯ ಮೂಲೆಯಿಂದ ಪಶ್ಚಿಮಕ್ಕೆ ಸುಮಾರು 21 ಸರಪಣಿಗಳ ದೂರದಲ್ಲಿ ಬಂದು ಸ್ಥಳಕ್ಕೆ ಹೋಗಿ, ಅಲ್ಲಿಂದ ಪಶ್ಚಿಮಕ್ಕೆ ಚಿಕ್ಕಮ್ಮನಹಳ್ಳಿ ಗ್ರಾಮದ ಸರ್ವೆ 50ನೆ ನಂಬರಿನ ದಕ್ಷಿಣ ಮೇರೆಯಲ್ಲಿ ಸರ್ವೆ 49 ನೆ ನಂಬರಿನ ಆಗ್ನೇಯ ಮೂಲೆಗೆ ಹೋಗಿ, ಅಲ್ಲಿಂದ ಈಶಾನ್ಯವಾಗಿ ಸದರಿ ಸರ್ವೆ ನಂಬರಿನ ಮತ್ತು ಮರಟಗೆರೆ (ಕೆರೆ) ಗ್ರಾಮದ ಸರ್ವೆ 83ನೆ ನಂಬರಿನ ಪೂರ್ವ ಮೇರೆಯಲ್ಲಿ ಸದರಿ 83ನೆ ನಂಬರಿನ ಈಶಾನ್ಯ ಮೂಲೆಗೆ ಹೋಗಿ, ಅಲ್ಲಿಂದ ವಾಯವ್ಯಕ್ಕೆ ಸದರಿ ನಂಬರಿನ ಉತ್ತರ ಮೇರೆಯಲ್ಲಿ 85ನೆ ಸರ್ವೆ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ: ಅಲ್ಲಿಂದ ಉತ್ತರಕ್ಕೆ ಆ ನಂಬರಿನ ಪೂರ್ವ ಮೇರೆಯಲ್ಲಿ ಅದರ ಈಶಾನ್ಯ ಮೂಲೆಗೆ ಹೋಗಿ, ಅಲ್ಲಿಂದ ವಾಯವ್ಯಕ್ಕೆ ಸರ್ವೆ 80ನೆ ನಂಬರಿನಲ್ಲಿ ಸುಮಾರು 66 ಸರಪಣಿಗಳ ದೂರ ಮರಟಗೆರೆ, ಬ್ಯಾಡರಹಳ್ಳಿ ಮತ್ತು ವಾಲಹಳ್ಳಿ ಗ್ರಾಮಗಳ ಮುಕ್ತಾಪ್ಪೆಗೆ ಹೋಗಿ, ಅಲ್ಲಿಂದ ಉತ್ತರಕ್ಕೆ ಬ್ಯಾಡರಹಳ್ಳಿ, ನಾಗಸಮುದ್ರ, ಮತ್ತು ವಾಲಹಳ್ಳಿ ಗ್ರಾಮಗಳ ಮೇರೆಯಲ್ಲಿ ನಾಗಸಮುದ್ರ ಗ್ರಾಮದ ಪೂರ್ವ ಮೇರೆಯಲ್ಲಿ ಬ್ಯಾಡರಹಳ್ಳಿ, ನಾಗಸಮುದ್ರ ಮತ್ತು ವಾಲಹಳ್ಳಿ ಗ್ರಾಮಗಳ ಮುಕ್ತಾಪ್ಪೆಯಿಂದ ಉತ್ತರಕ್ಕೆ ಸುಮಾರು 10 ಸರಪಣಿಗಳ ದೂರದಲ್ಲಿ ಬಂದು ಸ್ಥಳಕ್ಕೆ ಹೋಗಿ, ಅಲ್ಲಿಂದ ಪೂರ್ವಕ್ಕೆ ವಾಲಹಳ್ಳಿ ಗ್ರಾಮದ ಸರ್ವೆ 14ನೆ ನಂಬರಿನಲ್ಲಿ ಸುಮಾರು 58 ಸರಪಣಿಗಳ ದೂರ ಮರಟಗೆರೆ ಗ್ರಾಮದ 80 ಮತ್ತು 81ನೆ ಸರ್ವೆ ನಂಬರುಗಳ ಮತ್ತು ವಾಲಹಳ್ಳಿ ಗ್ರಾಮದ 4 ಮತ್ತು 14ನೆ ಸರ್ವೆ ನಂಬರುಗಳ ಮುಕ್ತಾಪ್ಪೆಗೆ ಹೋಗುತ್ತದೆ; ಅಲ್ಲಿಂದ ಉತ್ತರಕ್ಕೆ ಬಂದು ಸರಳ ರೇಖೆಯಲ್ಲಿ ವಾಲಹಳ್ಳಿ ಗ್ರಾಮದ ಸರ್ವೆ 4ನೆ ನಂಬರಿನಲ್ಲಿ ಸುಮಾರು 122 ಸರಪಣಿಗಳ ದೂರ ವಾಲಹಳ್ಳಿ, ಕಲ್ಲುಗುಂಡಿ ಮತ್ತು ಹಳ್ಳಿ ತಿಮ್ಮನಹಳ್ಳಿ ಗ್ರಾಮಗಳ ಮುಕ್ತಾಪ್ಪೆಗೆ ಹೋಗಿ, ಅಲ್ಲಿಂದ ಪಶ್ಚಿಮಕ್ಕೆ ಹಳ್ಳಿ ತಿಮ್ಮನಹಳ್ಳಿ ಮತ್ತು ವಾಲಹಳ್ಳಿ ಗ್ರಾಮಗಳ ನಡುವೆ ಸರಪಣಿನಲ್ಲಿ ವಾಲಹಳ್ಳಿ ಗ್ರಾಮದ ಸರ್ವೆ 4ನೆ ನಂಬರಿನ ವಾಯವ್ಯ ಮೂಲೆಗೆ ಹೋಗಿ ಅಲ್ಲಿ ಹಳ್ಳವನ್ನು ಸೇರಿ, ಅಲ್ಲಿಂದ ಉತ್ತರಕ್ಕೆ ಹಳ್ಳದ ಎಡಪಾರ್ಶ್ವದಲ್ಲಿ ಹೋಗಿ ಹೊರಟ ಸ್ಥಳವನ್ನು ಸೇರುತ್ತದೆ.

ಷರಾಗಳು.

A. ಸದರಿ ತಾಕಿನಲ್ಲಿ ಈ ಕೆಳಗೆ ನಮೂದಿಸುವ ದಾರಿಯ ಹಕ್ಕನ್ನು ಮಂಜೂರ್ಮಾಡಿ ಇದೆ:—

ಕುರುವಂಕದಿಂದ ನಾಗವೇದಿಗೆ ಹೋಗುವ ಗಾಡಿ ದಾರಿ; 12 ಅಡಿಗಳ ಅಗಲ; ಸಾರ್ವ ಕಾಲದಲ್ಲಿಯೂ ಜನ ಜಾನ್ವಾರು ಗಾಡಿಗಳ ತಿರುಗಾಟಕ್ಕೆ ಬಿಟ್ಟಿರತಕ್ಕದ್ದು. ಇದು ಜಂಗಲಿಯನ್ನು ಮರಟಗೆರೆ ಗ್ರಾಮದ ಸರ್ವೆ 85ನೆ ನಂಬರಿನ ಈಶಾನ್ಯ ಮೂಲೆಯಲ್ಲಿ ಪ್ರವೇಶಿಸಿ, ಈಶಾನ್ಯವಾಗಿ ಮರಟಗೆರೆ ಗ್ರಾಮದ ಸರ್ವೆ 80 ಮತ್ತು 81ನೆ ನಂಬರುಗಳಲ್ಲಿಯೂ ನರಕೀಪುರ ಗ್ರಾಮದ 62ನೆ ಸರ್ವೆ ನಂಬರಿನಲ್ಲಿಯೂ ಸುಮಾರು 125 ಸರಪಣಿಗಳ ದೂರ ಹೋಗಿ, ನರಕೀಪುರ ಗ್ರಾಮದ ಸರ್ವೆ 58ನೆ ನಂಬರಿನ ನೈರುತ್ಯ ಮೂಲೆಯಿಂದ ದಕ್ಷಿಣಕ್ಕೆ ಸುಮಾರು 23 ಸರಪಣಿಗಳ ದೂರದಲ್ಲಿ ಜಂಗಲಿಯ ಪೂರ್ವ ಮೇರೆಯಲ್ಲಿ ಜಂಗಲಿಯನ್ನೆಲ್ಲಿ ಬಿಡುತ್ತದೆ.

B. ಸದರಿ ತಾಕಿನಲ್ಲಿ ಈ ಕೆಳಗೆ ನಮೂದಿಸುವ ರಿಯಾಯಿತಿಗಳನ್ನು ಮಂಜೂರ್ಮಾಡಿ ಇದೆ:—

(1) ಕುಟುಂಬ ಬಂದಕ್ಕೆ ತಿಂಗಳು ಬಂದಕ್ಕೆ 5 ತಲೆ ಹೊರಗಳ ನೇರೆಗೆ ತರಗತಿ ವಿಂಗಡಿಸದ ಮರಗಳ ಬುಣಗಿ ಬಿದ್ದ ಅನುಪಯೋಗವಾದ ಮರವನ್ನು ಮುಫತ್ತಾಗಿ ಸಾದೆಗಾಗಿ ಕೊಡತಕ್ಕದ್ದು.

(2) ತರಗತಿ ವಿಂಗಡಿಸದ ಮರಗಳನ್ನು ವ್ಯವಸಾಯದ ಮುಟ್ಟುಗೋಳಿಗೋಸ್ಕರ—ಎಂದರೆ ವರ್ಷ ಬಂದಕ್ಕೆ ಕಂದಾಯ ತೆರತಕ್ಕ ಪ್ರತಿ ರೈತನಿಗೂ 2 ನೇಗಲುಗಳ ಮೇರೆಗೆ ಡಿಸ್ಪೆನ್ಸ್ ಫಾರೆಸ್ಟಿನಲ್ಲಿ ರೈತರಿಗೆ ಹಕ್ಕು ಇರುವ ಪರತ್ತುಗಳ ಮೇರೆಗೆನೆ—ಎಂದರೆ ಮುಫತ್ತಾಗಿ ಸ್ಟೇಟ್ ಫಾರೆಸ್ಟಿನಿಂದ ಕೊಡತಕ್ಕದ್ದು.

(3) ವರ್ಷ ಬಂದಕ್ಕೆ ಹುಲ್ಲು ಮನೆ ಬಂದಕ್ಕೆ 10 ತಲೆ ಹೊರೆಗಳ ಮೇರೆಗೆ ಮನೆ ಹೊದಿಸುವ ಹುಲ್ಲನ್ನು ಮುಫತ್ತಾಗಿ ಕೊಡತಕ್ಕದ್ದು.

1ರಿಂದ 3ರವರೆಗಿನ ರಿಯಾಯಿತಿಗಳು ಮರಟಗೆರೆ ಗ್ರಾಮಸ್ಥರಿಂದ ಅನುಭವಿಸತಕ್ಕವುಗಳು.

2ನೆ ರಿಯಾಯಿತಿಯೂ ಚಿಕ್ಕಮ್ಮನಹಳ್ಳಿ ರೈತರಿಂದ—1 ಮತ್ತು 3ನೆ ರಿಯಾಯಿತಿಗಳು ಮುರುಳಸಿದ್ದನಹಳ್ಳಿ ರೈತರಿಂದ ಅನುಭವಿಸತಕ್ಕವುಗಳು.

ಷರಾ:—(1) ಆಲ್ಯೆರಿನಲ್ಲಿ ಜಂಗಲಿಯ ಗಡಿಯನ್ನು ಸವರುವಾಗ ಸಾಗುವಳಿ ಜಮೀನಿನ ಉದ್ದಕ್ಕೂ 5 ಸಂಪಣಿಗಳ ಅಗಲ ಕಿನಾರೆಯನ್ನು ಬಿಡಬೇಕು.

(2) (2)ನೆ ರಿಯಾಯಿತಿಯನ್ನು ಸದರಿ ಉದ್ದೇಶಕ್ಕಾಗಿಯೇ ವಿಂಗಡಿಸಲ್ಪಟ್ಟ ಪ್ರದೇಶದಲ್ಲಿ ಯಾಗಲಿ ಅಥವಾ ವರ್ಷಗಟ್ಟಲೆಯಾಗಿ ವಿಂಗಡಿಸುವ ಕೊಪೆ ಯಾ ಜಂಗಲಿ ಪ್ರದೇಶದಲ್ಲಿಯಾಗಲಿ ಉಗಯೋಗಿಸತಕ್ಕದ್ದು.

(3) ರಿಯಾಯಿತಿಗಳಲ್ಲಿ ನಮೂದಿಸಿದ ಜಂಗಲಿ ಉತ್ಪತ್ತಿಯನ್ನು ಸ್ಥಳೀಯ ಜಂಗಲಿ ಅಧಿಕಾರಿಗಳಿಂದ ಮುಫತ್ತಾಗಿ ಕೊಡಲ್ಪಡುವ ಲೈಸೆನ್ಸುಗಳ ಮೇಲೆ ತಾಗಿಸತಕ್ಕದ್ದು.